ಶ್ರೀ ಆರ್.ಎಲ್. ಜಾಲಪ್ಪ.—ಮಾನ್ಯ ಮಾಜಿ ಅರ್ಥ ಮಂತ್ರಿಗಳು ಬಹಳ ಚಾಕಚಕ್ಯತೆಯಿಂದ ನನ್ನ ಹೆಸರು ತಂದಿದ್ದಾರೆ. ತಾವು ಅನುಭವಸ್ಥರು. ತಮಗೆ ಭ್ರಷ್ಟಾಚಾರ ಚನ್ನಾಗಿ ಗೊತ್ತಿದೆ, ನನಗೆ ಗೊತ್ತಿಲ್ಲ. ಅದರಲ್ಲೇನಾದರೂ ನನ್ನ ಭ್ರಷ್ಟಾಚಾರ ಇದ್ದರೆ ನಾನು ಮಂತ್ರಿ ಪದವಿಯನ್ನು ಬಿಟ್ಟು ಹೋಗುತ್ತೇನೆ, ಸುಮ್ಮನೆ ಏತಕ್ಕೆ ಮಾತನಾಡುತ್ತಿದ್ದೀರೆಂದು ಅರ್ಥವಾಗುವುದಿಲ್ಲ. ನಾನು ಎಕ್ಸ್‌ಪೋಸ್ ಮಾಡುವುದಾದರೆ ಏನಾಗುತ್ತದೆಂದು ಗೊತ್ತಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಮಾಡಿ, ಮಾಡಲೇಬೇಕು, ಮುಚ್ಚುಮರೆ ಏತಕ್ಕೆ ಮಾಡುತ್ತೀರಿ ?

ಒಬ್ಬರು ಮಾನ್ಯ ಸದಸ್ಯರು.—ಮಾನ್ಯ ಮಂತ್ರಿಗಳು ಮುಖ್ಯವಾಗಿ ಭ್ರಷ್ಟಾಚಾರದ ಪ್ರಶ್ನೆ ಎತ್ತಿದ್ದಾರೆ. ಭ್ರಷ್ಟಾಚಾರವನ್ನು ಮಂತ್ರಿಗಳೇ ಮಾಡಲಿ ಅಥವಾ ಬೇರೆ ಯಾರೇ ಮಾಡಲಿ ಅದು ರಾಜ್ಯದ ಪ್ರಶ್ನೆಯಾಗುತ್ತದೆ. ಆದ್ದರಿಂದ, ವಿಷಯವನ್ನು ಎಕ್ಸ್‌ಪೋಸ್ ಮಾಡದೆ ಮಂತ್ರಿಗಳಾಗಲೀ ಸದಸ್ಯರಾಗಲೀ ಬಚ್ಚಿಟ್ಟರೆ ರಾಜ್ಯಕ್ಕೆ ಮೋಸ ಮಾಡಿದಂತಾಗುತ್ತದೆ. ಆದಕಾರಣ ಮಂತ್ರಿಗಳು ಎಕ್ಸ್‌ಪೋಸ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ.—ಮುಖ್ಯ ಮಂತ್ರಿಗಳು ಶ್ವೇತಪತ್ರವನ್ನು ಹೊರಡಿಸುವುದಾಗಿ ಹೇಳಿದ್ದಾರೆ ನನ್ನ ಮೇಲೆ ಏನಾದರೂ ಆಪಾದನೆ ಇದ್ದರೆ ನಾನು ರಾಜೀನಾಮೆ ಕೊಟ್ಟು ಹೋಗುತ್ತೇನೆ. ಕೋಟ್ಯಾಂತರ ರೂಪಾಯಿ ಭ್ರಷ್ಟಾಚಾರ ನಡೆದಾಗ ನಾನು ಇದ್ದೆನು ಎಂದು ವಿರೋಧ ಪಕ್ಷದ ನಾಯಕರು ಸೂಕ್ಷ್ಮವಾಗಿ ಹೇಳಿದ್ದಾರೆ. ಅದನ್ನು ಸಾಬೀತು ಮಾಡಿ ಕಣ್ಣೆದುರಿಗೆ ಇಡಿ ಎಂದು ನಾನು ಅವರನ್ನು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮುಖ್ಯ ಮಂತ್ರಿಗಳು ಶ್ವೇತಪತ್ರವನ್ನು ಏನು ಹೊರಡಿಸುವುದಾಗಿ ಹೇಳಿದ್ದಾರೆ ಅದು ಬರುವವರೆಗೆ ಸ್ವಲ್ಪ ಸುಮ್ಮನಿದ್ದರೆ ಒಳ್ಳೆಯದು. ಅದು ಬರಲಿ, ಬಂದಮೇಲೆ ಇಡುವುದು ಮಾಡುವುದು ಮತ್ತೊಂದಕ್ಕೆ ನಾವು ಸಹಕಾರ ಕೊಡುತ್ತೇವೆ. ಆದರೆ ರಾಮದೇವ್ ಏನು ಹೇಳಿದರು ಎಂದರೆ ಈ ಕಡೆ ಶ್ರೀ ರಾಮಕೃಷ್ಣ ಹೆಗಡೆಯವರು ಪ್ರತಿಜ್ಞಾ ವಿಧಿ ಸ್ವೀಕಾರ ಮಾಡುತ್ತಿದಾಗ ಅಲ್ಲಿ ಮೀಟಿಂಗ್ ನಡೆಸಿ ಕೋಟ್ಯಾಂತರ ರೂಪಾಯಿಗಳ ವ್ಯವಹಾರ ನಡೆಸುತ್ತಿದ್ದರು ಎಂದು. ಆದಕ್ಕಿಂತ ಮೊದಲೇ ಜಾಲಪ್ಪನವರು ಬಿ.ಡಿ.ಎ. ಸದಸ್ಯರಾಗಿದ್ದು ೧೦ನೇ ತಾರೀಖು ನಡೆದ ಮೀಟಿಂಗ್‌ನಲ್ಲಿ ಹಾಜರಿದ್ದರು ಎಂಬುದಕ್ಕೆ ದಾಖಲೆ ಇದೆ. ಹಾಗಿದ್ದಮೇಲೆ ಅವರ ವ್ಯಕ್ತಿತ್ವದ ಮೇಲೆ ರಿಫ್ಲೆಕ್ಷನ್ ಆಗುತ್ತದೆ. ಆದ್ದರಿಂದ ಈಗ ಅವರು ಆ ಪ್ರಶ್ನೆ ಎತ್ತುವುದು ತಪ್ಪು.

ಶ್ರೀ ಪಿ. ರಾಮದೇವ್.—ಆವತ್ತು ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯುವ ದಿವಸ ಜಾಲಪ್ಪನವರು ಮಂತ್ರಿಗಳಾಗಿರಲಿಲ್ಲ. ಆದು ಅವರು ಬಿ.ಡಿ.ಎ. ಸದಸ್ಯರಾಗಿದ್ದರು. ಬಿ.ಡಿ.ಎ. ಅಧ್ಯಕ್ಷರಾದ ಕೆ.ಕೆ. ಮೂರ್ತಿಯವರ ಮೇಲೆ ಕೋಟ್ಯಾಂತರ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆಂದು ಆಪಾದನೆ ಮಾಡಿದ್ದಾರೆ.

MR. DEPUTY SPEAKER.—Question hour is over.

## ಚುಕ್ಕೆ ಗುರುತಿಲ್ಲದ ಪ್ರಶ್ನೆಗಳು ಹಾಗೂ ಲಿಖಿತ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಅಧ್ಯಕ್ಷರೇ ಚುಕ್ಕೆ ಗುರುತಿಲ್ಲದ ೫೯ ಪಟ್ಟಿ ಪ್ರಶ್ನೆಗಳು ಮತ್ತು ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ತಾವು ಅನುಮತಿ ಕೊಟ್ಟರೆ ಒಂದು ಪ್ರಶ್ನೆ ಎತ್ತುತ್ತೇನೆ. ನಾನು ರೂಲ್ ೩೩೪ರ ಪ್ರಕಾರ ಒಂದು ಗಂಭೀರವಾದ ಪ್ರಶ್ನೆಯನ್ನು ಎತ್ತಬೇಕೆಂದಿದ್ದೇನೆ.

ಶ್ರೀ ಎಂ.ಎಸ್. ಪಾಟೀಲ್.—ಪಟ್ಟಿಯಲ್ಲಿ ಇನ್ನೂ ಪ್ರಶ್ನೆಗಳು ಇವೆ. ನಾವು ಪ್ರಶ್ನೆಗಳನ್ನು ಹಾಕಿದ ಉದ್ದೇಶವಾದರೂ ಏನು ? ಸದನದ ಹಕ್ಕನ್ನು ಚ್ಯುತಿ ಮಾಡುವುದು ಸರಿಯಲ್ಲ. ದಯವಮಾಡಿ ಮುಂದಿನ ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶ ಕೊಡಿ.

(ಮುಂದಲ)

MR. DEPUTY SPEAKER.—I have given my ruling. Order, Order.

*(Interruption)*

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಈ ರೀತಿಯಾದರೆ ನಾವು ಪ್ರೊಟೆಸ್ಟ್ ಮಾಡಬೇಕಾಗುತ್ತದೆ.

*(Interruption)*

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳು ಮತ್ತು ಲಿಖಿತ ಉತ್ತರಗಳು

೧೦. ಶ್ರೀ ಟಿ ಪಿ. ಬೋರಯ್ಯ (ಬನ್ನೂರು).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

ಅ) ಟಿ. ನರಸೀಪುರ ತಾಲ್ಲೂಕಿನಲ್ಲಿರುವ ಇನಾಂ ಗ್ರಾಮಗಳ ಸಂಖ್ಯೆ ಎಷ್ಟು,

ಆ) ಅವುಗಳ ವಿವರಗಳನ್ನು ತಿಳಿಸುವುದು, ಇವು ಸರಕಾರಕ್ಕೆ ಸೇರಿದ್ದು ಯಾವಾಗ,

ಇ) ಈ ಗ್ರಾಮಗಳಲ್ಲಿನ ರೈತರಿಗೆ ಜಮೀನು ಮಾಲಿಕನೆಂದು ಪರಿಗಣಿಸಲು ನಿಗದಿಯಾದ ಪ್ರೀಮಿಯಂ ಮೊಬಲಗು ಎಷ್ಟು ? ಗ್ರಾಮವಾರು ವಿವರಗಳನ್ನು ತಿಳಿಸುವುದು,

ಈ) ಇದನ್ನು ಇನಾಂ ರದ್ದಿಯಾತಿ ಜಿಲ್ಲಾಧಿಕಾರಿಗಳು ನಿಗದಿ ಮಾಡಿರುವುದಕ್ಕೆ ವಿರುದ್ಧವಾಗಿ ರೈತರಿಂದ ಹಣ ವಸೂಲು ಮಾಡುತ್ತಿರುವದು ಸರಕಾರದ ಗಮನಕ್ಕೆ ಬಂದಿದೆಯೇ,

ಉ) ಹಾಗೇನಾದರೂ ವಸೂಲಿ ಮಾಡಿದ್ದರೆ ಇದಕ್ಕೆ ಸರಕಾರದಿಂದ ವಿಶೇಷವಾದ ಆದೇಶ ಏನಾದರೂ ಇದೆಯೇ,

ಊ) ಕಾನೂನು ಬಾಹಿರವಾಗಿ ವಸೂಲಿ ಮಾಡಿರುವಕ್ಕೆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದೇ,

ಋ) ಆದೇಶವಿಲ್ಲದೆ ವಸೂಲಿ ಮಾಡಿರುವ ಮೊಬಲಗನ್ನು ರೈತರಿಗೆ ವಾಪಸ್ಸು ಕೊಡಲಾಗುವುದೆ ?

ಶ್ರೀ ವಿ.ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).—

ಅ) ೩೫ ಇನಾಂ ಗ್ರಾಮಗಳಿದ್ದವು.

ಆ) ಗ್ರಾಮವಾರು ವಿವರಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ನಮೂದಿಸಿದೆ. ಈ ಗ್ರಾಮಗಳು ೨–೧೦–೫೬ರಂದು ಸರಕಾರಕ್ಕೆ ಸೇರಿವೆ,

ಇ) ಲಗತ್ತಿಸಿರುವ ಪಟ್ಟಿಯಲ್ಲಿ ವಿವರಗಳನ್ನು ಕೊಟ್ಟಿದೆ.

ಈ) ಬಂದಿಲ್ಲ.

ಉ) ಮೇಲೆ ಹೇಳಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಇಂತಹ ನಿರ್ದಿಷ್ಟ ಪ್ರಕರಣಗಳು ಸರಕಾರದ ಗಮನಕ್ಕೆ ಬಂದರೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಋ) ಮೇಲೆ ಕೊಟ್ಟಿರುವ (ಈ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.
ಜಮೀನು ಮಾಲೀಕನೆಂದು ಪರಿಗಣಿಸಲು ನಿಗದಿಯಾದ ಪ್ರೀಮಿಯಂ ಮೊಬಲಗು

ಗ್ರಾಮವಾರು ವಿವರಣೆ.

| | ಕಸಬಾ ಹೋಬಳಿ | ವಸೂಲಿಗೆ ಆದೇಶವಾದ ಕಂದಾಯ |
|---|---|---|
| 1 | ಮಂತ್ತತ್ತಿ | 31591-40 |
| 2 | ರಾಮನಾಥಪುರದ ಹುಂಡಿ | 30642-60 |
| 3 | ಬೊಮ್ಮನಾಯಕನಹಳ್ಳಿ | 16256-20 |
| 4 | ಅಗಸ್ತ್ಯಪುರ | 5646-20 |
| 5 | ಹೊಸಕೋಟೆ | 44242-60 |
| 6 | ಕುಪ್ಯ | 20441-60 |
| 7 | ತುಂಬಲ | 45418-80 |
| 8 | ಬಸವನಪುರ | 3327-60 |
| 9 | ಹೊನ್ನೂರು | 29403-80 |
| 10 | ಚನ್ನಂಜವಡಿಯರಪುರ | 3705-00 |
| | | 2,30675-40 |
| | ತಲಕಾಡು ಹೋಬಳಿ | |
| 11 | ಮಡವಾಡಿ | 32686-20 |
| 12 | ಕೊಪ್ಪಳು | 14850-80 |
| 13 | ಟಿ. ಮೇಗಡಹಳ್ಳಿ | 16943-80 |
| 14 | ಕಲಿಯೂರು | 28450-00 |
| | | 92930-80 |
| | ಮೂಗೂರು ಹೋಬಳಿ | |
| 15 | ಹಂಕನೂರು | 28187-40 |
| | ಸೋಸಲೆ ಹೋಬಳಿ | |
| 16 | ಬೂದಹಳ್ಳಿ | 9098-80 |
| 17 | ಸೋಮನಾಥಪುರ | 27882-00 |
| 18 | ಕೇತುಪುರ | 7045-00 |
| 19 | ಚಿಮಿಲಿ | 25864-40 |
| 20 | ದೊಡ್ಡಬಾಗಿಲು | 162450-00 |
| 21 | ಬಿನಕನಹಳ್ಳಿ | 74274-40 |
| 22 | ನಾಗಲಕರೆ | 2061-20 |
| 23 | ಕೋನಗಹಳ್ಳಿ | 8879-20 |
| 24 | ಎಸ್‌ಕೆಪಿ ಅಗ್ರಹಾರ | 37062-60 |
| 25 | ಜೋಡಿಬಾಗೂರು | — |
| 26 | ಎಸ್. ಮೇಗಡಹಳ್ಳಿ | 82886-20 |
| 27 | ಉಕ್ಕಲಗೆರೆ | 16415-20 |
| 28 | ಕಾರ್ಗಹಳ್ಳಿ | 33641-40 |
| | | 4,87560-40 |

ಬನ್ನೂರು ಹೋಬಳಿ

| | | |
|---|---|---|
| 29 | ಸೀಪಳ್ಳಿ | 17350-00 |
| 30 | ಹೆಗ್ಗೂರು | 22788-80 |
| 31 | ಪೂರೆಗೌಡನಹಳ್ಳಿ | 11041-20 |
| 32 | ಯಡಪಳ್ಳಿ | 8691-20 |
| 33 | ಹುನಸಗಪಳ್ಳಿ | 12938-80 |
| 34 | ವೆಣಸಿಕ್ಯಾತನಹಳ್ಳಿ | 27092-40 |
| 35 | ದೊಡ್ಡಮಲಗೂಡು | 14497-40 |
| | | 1,14399-80 |

ವಿದ್ಯುತ್‌ಚ್ಛಕ್ತಿ ಅಭಾವದಿಂದ ತೊಂದರೆ ಉಂಟಾಗಿರುವ ಬಗ್ಗೆ.

೧೧. ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ವಿದ್ಯುಚ್ಛಕ್ತಿಮತ್ತು ಆಬ್ಕಾರಿ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

ಅ) ರಾಜ್ಯದಲ್ಲಿ ವಿದ್ಯುತ್ ಕೊರತೆಯಿಂದ ಎಲ್ಲಾ ವಿಭಾಗದ ಜನರು ತೊಂದರೆಗೀಡಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ಇಂದು ರಾಜ್ಯದ ವಿದ್ಯುತ್ ಉತ್ಪಾದನೆ ಎಷ್ಟಿದೆ ಕೊರತೆ ಎಷ್ಟಿದೆ ಎಂಬುದನ್ನು ತಿಳಿಸುವುದು

ಇ) ವಿದ್ಯುತ್ ಕೊರತೆ ನೀಗಿಸಲು ಸರಕಾರ ಕೈಗೊಂಡಿರುವ ಹಾಗೂ ಕೈಕೊಳ್ಳಬೇಕೆಂದಿರುವ ಕ್ರಮಗಳಾವುವು ?

ಶ್ರೀ ಜೆ.ಹೆಚ್. ಪಟೇಲ್ (ವಿದ್ಯುಚ್ಛಕ್ತಿ ಮತ್ತು ಅಬಕಾರಿ ಮಂತ್ರಿಗಳು).—

ಅ) ಹೌದು.

ಆ) ಏಪ್ರಿಲ್ 1982ರಿಂದ ಫೆಬ್ರವರಿ 1983ರವರೆಗೆ ಉತ್ಪಾದನೆ ಕೊರತೆಯನ್ನು ಕೆಳಗೆ ಕೊಟ್ಟಿದೆ.

| ಉತ್ಪಾದನೆ | ಕೊರತೆ |
|---|---|
| 7161 ಎಂ.ಯು. | 1669 ಎಂ. ಯೂನಿಟ್‌ಗಳು (ಗೋವಾ ಸೇರಿದಂತೆ) |

ಇ) ವಿವಿಧ ಜಲ ವಿದ್ಯುತ್ ಮತ್ತು ಶಾಖ ವಿದ್ಯುತ್ ಯೋಜನೆಗಳನ್ನು ಕೈಗೊಂಡಿದೆ. ಮತ್ತು ಇದ್ದ ಈ ತೀವ್ರ ವಿದ್ಯುತ್ ಕೊರತೆಯನ್ನು ಸ್ವಲ್ಪ ಮಟ್ಟಿಗೆ ಸುಧಾರಿಸಲು ಆಂಧ್ರ ಮತ್ತು ಮಹಾರಾಷ್ಟ್ರಗಳಿಂದ ವಿದ್ಯುತ್ ಆಮದು ಮಾಡಿಕೊಳ್ಳುತ್ತಿದೆ. ಫೆಬ್ರವರಿ ಅಂತ್ಯದ ವರೆಗೆ 1982-83ರಲ್ಲಿ 426 ದಶಲಕ್ಷ ಯೂನಿಟ್‌ಗಳನ್ನು ನೆರೆ ರಾಜ್ಯಗಳಿಂದ ವಿದ್ಯುತ್ ಆಮದು ಮಾಡಿಕೊಳ್ಳಲಾಗಿದೆ.